
ಕರ್ನಾಟಕ ರಾಜ್ಯ ಪೊಲೀಸ್

KARNATAKA STATE POLICE

# ವಾರ್ತಾ ಪತ್ರಿಕೆ

NEWS LETTER

ಜನವರಿ-2021 ★★ JANUARY - 2021

**ಶ್ರೀ ಪ್ರವೀಣ್ ಸೂದ್, ಐ.ಪಿ.ಎಸ್.**

ಮಹಾನಿರ್ದೇಶಕರು ಮತ್ತು ಆರಕ್ಷಕ ಮಹಾನಿರೀಕ್ಷಕರು,

ಕರ್ನಾಟಕ ರಾಜ್ಯ, ಬೆಂಗಳೂರು

## ಸಂದೇಶ

ಆತ್ಮೀಯ ಸಹೋದ್ಯೋಗಿಗಳೆ,

2020ನೇ ಇಸವಿಯು ಪೊಲೀಸ್ ಪಡೆಗಳಿಗೆ ಅನೇಕ ಸವಾಲುಗಳಿಂದ ಕೂಡಿದ ವರ್ಷವಾಗಿತ್ತು. ವರ್ಷದ ಆದಿಯು NRC ಮತ್ತು CAA ಪ್ರತಿಭಟನೆಯೊಂದಿಗೆ ಪ್ರಾರಂಭವಾಗಿ ನಂತರ ಕೋವಿಡ್-19 ಸಾಂಕ್ರಾಮಿಕ ಸೋಂಕು ಹರಡುವಿಕೆ, ವಿಧಾನಸಭೆ ಉಪಚುನಾವಣೆಗಳು ಮತ್ತು ಗ್ರಾಮ ಪಂಚಾಯಿತಿ ಚುನಾವಣೆಯೊಂದಿಗೆ ಮುಕ್ತಾಯಗೊಂಡಿದೆ. ಇವುಗಳೆಲ್ಲದರ ನಡುವೆ, ಬೆಂಗಳೂರು ನಗರದಲ್ಲಿ ಕಾನೂನು ಮತ್ತು ಸುವ್ಯವಸ್ಥೆಗೆ ಭಂಗ ತಂದಂತಹ ಒಂದೆರೆಡು ಘಟನೆಗಳು, ರಾಜ್ಯ ರಸ್ತೆ ಸಾರಿಗೆ ನಿಗಮದ ನೌಕರರ ಮುಷ್ಕರ ಹಾಗೂ ಕೃಷಿ ಕಾಯ್ದೆ ವಿರುದ್ಧ ರೈತರ ಪ್ರತಿಭಟನೆಗಳೂ ಸಹ ಸೇರಿವೆ.

ನಾವೆಲ್ಲರೂ ಒಟ್ಟಾಗಿ ಪಯಣಿಸುತ್ತಾ, ಈ ಕ್ಲಿಷ್ಟಕರ ಪರಿಸ್ಥಿತಿಯನ್ನು ನಿಭಾಯಿಸುವಲ್ಲಿ ಯಶಸ್ವಿಯಾಗಿದ್ದೇವೆ. ದುರಂತದ ಸಂಗತಿಯೆಂದರೆ, ಈ ಪಯಣದಲ್ಲಿ ಕಳೆದ ವರ್ಷ ನಮ್ಮ 99 ಜನ ಸಿಬ್ಬಂದಿ ಮತ್ತು ಅಧಿಕಾರಿಗಳು ಕೋವಿಡ್-19 ಸೋಂಕಿನಿಂದ ಮತ್ತು 17 ಸಿಬ್ಬಂದಿ/ ಅಧಿಕಾರಿಗಳು ವಿವಿಧ ಅಪಘಾತಗಳಲ್ಲಿ ಮರಣ ಹೊಂದಿರುತ್ತಾರೆ. ಅವರೆಲ್ಲರ ನಿಧನಕ್ಕೆ ನಮ್ಮ ತೀವ್ರ ಸಂತಾಪವಿದೆ.

ಸಂಕಷ್ಟಕರ ಆರ್ಥಿಕ ಪರಿಸ್ಥಿತಿಯ ನಡುವೆಯೂ, ಪೊಲೀಸ್ ಮುಖ್ಯ ಕಛೇರಿಯಿಂದ ನಾವು ಪ್ರಯಾಣ ಭತ್ಯೆ, ಆರೋಗ್ಯ ಭಾಗ್ಯ ಯೋಜನೆ, ತನಿಖಾ ಭತ್ಯೆಗಳನ್ನು ವಿಳಂಬವಿಲ್ಲದೆ ವಿತರಿಸಲು ಎಲ್ಲಾ ಅಗತ್ಯ ಕ್ರಮ ಕೈಗೊಂಡಿರುತ್ತೇವೆ. ಇದು ಮಾನ್ಯ ಮುಖ್ಯಮಂತ್ರಿಗಳು ಹಾಗೂ ಮಾನ್ಯ ಗೃಹಮಂತ್ರಿಗಳ ಸಂಪೂರ್ಣ ಸಹಕಾರವಿಲ್ಲದೆ ಸಾಧ್ಯವಾಗುತ್ತಿರಲಿಲ್ಲ. ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಕಾರ್ಯಯೋಜನೆಗಳನ್ನು ಮತ್ತಷ್ಟು ಬಲಪಡಿಸಲಾಗಿದೆ. ಪೊಲೀಸ್ ಗೃಹ -2020 ಯೋಜನೆಯನ್ನು ಮಾರ್ಚ್ 2021 ರೊಳಗೆ ಮುಕ್ತಾಯಗೊಳಿಸಲಾಗುವುದು. ವಸತಿಗೃಹಗಳ ನಿರ್ಮಾಣದ ಜೊತೆಗೆ, ಕಾಂಪೌಂಡ್ ಗೋಡೆ ನಿರ್ಮಾಣ, ಆಂತರಿಕ ರಸ್ತೆಗಳು ಮತ್ತು ಚರಂಡಿಗಳ ನಿರ್ಮಾಣದಂತಹ ಅಭಿವೃದ್ಧಿ ಕಾರ್ಯಗಳನ್ನೂ ಸಹ ಪೊಲೀಸ್‌ಗೃಹ-2020 ರಲ್ಲಿ ಸೇರ್ಪಡೆ ಮಾಡಲಾಗಿದೆ. ಪೊಲೀಸ್ ಇಲಾಖೆಯ ಮಹತ್ವಾಕಾಂಕ್ಷಿ ಯೋಜನೆಯಾದ, ಪೊಲೀಸ್‌ಗೃಹ-2025 ಅನ್ನು ಅತಿ ಶೀಘ್ರದಲ್ಲೇ ಕೈಗೆತ್ತಿಕೊಳ್ಳಲಾಗುವುದು.

ಸಂಕಷ್ಟಕ್ಕೆ ಸಿಲುಕಿದ ನಾಗರೀಕರಿಗೆ ಸಮಯೋಚಿತ ಸಹಾಯಹಸ್ತ ನೀಡುವಲ್ಲಿ ಈಗಾಗಲೇ ERSS-112 ಯೋಜನೆಯು ಜನಸಮುದಾಯದಿಂದ ಅಪಾರ ಜನಮನ್ನಣೆ ಗಳಿಸಿ, ನಾಗರೀಕರ ದೃಷ್ಟಿಯಲ್ಲಿ ಪೊಲೀಸ್‌ರ ಹಿರಿಮೆಯನ್ನು ಎತ್ತಿಹಿಡಿಯುವಲ್ಲಿ ಯಶಸ್ವಿಯಾಗಿದೆ.

ಕಳೆದ ವರ್ಷ 1200 ಹೊಸ ವಾಹನಗಳು ನಮ್ಮ ಇಲಾಖೆಗೆ ಸೇರ್ಪಡೆಯಾಗಿವೆ ಹಾಗೂ 1500 ಹಳೆಯ ವಾಹನಗಳನ್ನು ನಿರುಪಯುಕ್ತಗೊಳಿಸಲಾಗಿದೆ. ಶಿಥಿಲಗೊಂಡ ನೂರಾರು ವಸತಿಗೃಹಗಳನ್ನು ನೆಲಸಮ ಮಾಡಲಾಗಿದೆ.

2020ನೇ ಸಾಲು ನೇಮಕಾತಿ ವಿಭಾಗಕ್ಕೆ ಸಂಬಂಧಿಸಿದಂತೆ, ಚರಿತ್ರಾರ್ಹ ವರ್ಷವಾಗಿದೆ. ಈ ವರ್ಷದ ಕೊನೆಯ ವೇಳೆಗೆ ರಿಕ್ತ ಸ್ಥಾನಗಳ ಸ್ಥಿತಿಯು 23% ರಿಂದ 15% ಗೆ ಗಣನೀಯವಾಗಿ ಇಳಿಮುಖವಾಗಿದೆ. ಮುಂದಿನ ದಿನಗಳಲ್ಲಿ, ರಿಕ್ತಸ್ಥಾನಗಳ ಇಳಿಮುಖದಿಂದಾಗಿ ಸಿಬ್ಬಂದಿಗಳಿಗೆ ಕಾರ್ಯದೊತ್ತಡವು ಗಣನೀಯವಾಗಿ ಕಡಿಮೆಯಾಗಲಿದೆ. ತಂತ್ರಜ್ಞಾನಗಳನ್ನು ಸದುಪಯೋಗ ಪಡಿಸಿಕೊಳ್ಳುವುದರ ಜೊತೆಗೆ ಪ್ರಕ್ರಿಯೆಗಳ ಪುನಶ್ಚೇತನಗೊಳಿಸುವಿಕೆ ಮುಖಾಂತರ ಇದು ಸಾಧ್ಯವಾಗಿದೆ.

2021ನೇ ಇಸವಿಯು ಬಹಳ ಅನಿಶ್ಚಿತತೆಯಿಂದ ಕೂಡಿದ್ದರೂ ಸಹ, ನಿಮ್ಮ ಸಂಪೂರ್ಣ ಸಹಕಾರದಿಂದಾಗಿ, ಮುಂದಿನ ವರ್ಷಗಳಲ್ಲಿ, ಕರ್ನಾಟಕ ರಾಜ್ಯ ಪೊಲೀಸ್ ಪಡೆಯು ದೇಶದಲ್ಲೇ ಅತ್ಯುತ್ತಮ ಪೊಲೀಸ್ ಪಡೆಯೆಂಬ ಹೆಗ್ಗಳಿಕೆಗೆ ಪಾತ್ರವಾಗುವುದರಲ್ಲಿ ಯಾವುದೇ ಸಂಶಯವಿಲ್ಲ.

**ಶುಭಾಶಯಗಳೊಂದಿಗೆ,**

**ತಮ್ಮ ನಂಬುಗೆಯ,**

**(ಪ್ರವೀಣ್ ಸೂದ್)**

ಡಿಜಿ ಮತ್ತು ಐಜಿಪಿ

ಕರ್ನಾಟಕ.

## ಮಾನ್ಯ ಮುಖ್ಯಮಂತ್ರಿಗಳ ಪದಕ ಪ್ರದಾನ ಸಮಾರಂಭ




2017ನೇ ಸಾಲಿನ ಮಾನ್ಯ ಮುಖ್ಯಮಂತ್ರಿಗಳ ಪದಕ ವಿಜೇತರಾದ ಶ್ರೀ. ಎ.ಬಿ. ಫ್ರಾನ್ಸಿಸ್, " ಕಂಟೋನ್‌ಮೆಂಟ್ ರೈಲ್ವೆ ಪೊಲೀಸ್ ಠಾಣೆ " ಇವರು ನಿಧನ ಹೊಂದಿದ್ದರಿಂದ ಇವರ ಧರ್ಮಪತ್ನಿ ಶ್ರೀಮತಿ ರೋಸಲಿನ್ ಮೇರಿ ರವರಿಗೆ ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ಪದಕವನ್ನು ನೀಡಿ ಗೌರವಿಸುತ್ತಿರುವುದು.

ಮಾನ್ಯ ಮುಖ್ಯಮಂತ್ರಿಗಳ ಪದಕ ವಿಜೇತರಾದ 2017ನೇ ಸಾಲಿನ - 117 ಅಧಿಕಾರಿ / ಸಿಬ್ಬಂದಿಗಳಿಗೆ ಮತ್ತು 2018ನೇ ಸಾಲಿನ - 120 ಅಧಿಕಾರಿ / ಸಿಬ್ಬಂದಿಗಳಿಗೆ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ಮತ್ತು ಮಾನ್ಯ ಗೃಹಸಚಿವರಾದ ಶ್ರೀ ಬಸವರಾಜ ಬೊಮ್ಮಾಯಿರವರು ಪದಕಗಳನ್ನು ನೀಡಿ ಗೌರವಿಸಿದರು.

## 2017ನೇ ಸಾಲಿನ ಮಾನ್ಯ ಮುಖ್ಯಮಂತ್ರಿಗಳ ಪದಕ ವಿಜೇತ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳು



## 2018ನೇ ಸಾಲಿನ ಮಾನ್ಯ ಮುಖ್ಯಮಂತ್ರಿಗಳ ಪದಕ ವಿಜೇತ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳು



2017 ನೇ ಸಾಲಿನಲ್ಲಿ – 117 (ಅಧಿಕಾರಿ / ಸಿಬ್ಬಂದಿಗಳು) ಮತ್ತು 2018 ನೇ ಸಾಲಿನಲ್ಲಿ – 120 (ಅಧಿಕಾರಿ / ಸಿಬ್ಬಂದಿಗಳು) ಮಾನ್ಯ ಮುಖ್ಯಮಂತ್ರಿಗಳ ಪದಕ ವಿಜೇತರಿಗೆ ಪದಕ ಪ್ರದಾನ ಸಮಾರಂಭ ದಿನಾಂಕ: 20/11/2020 ರಂದು ನಡೆದಿರುತ್ತದೆ. ವಿಧಾನಸೌಧದಲ್ಲಿ ಪದಕ ವಿಜೇತ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳೊಂದಿಗೆ ಶ್ರೀ ಬಿ.ಎಸ್ ಯಡಿಯೂರಪ್ಪ, ಸನ್ಮಾನ್ಯ ಮುಖ್ಯಮಂತ್ರಿಗಳು, ಶ್ರೀ ಬಸವರಾಜ ಬೊಮ್ಮಾಯಿ, ಸನ್ಮಾನ್ಯ ಗೃಹ ಸಚಿವರು, ಡಾ॥ ರಜನೀಶ್ ಗೋಯೆಲ್, ಐಎಎಸ್, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಒಳಾಡಳಿತ ಇಲಾಖೆ, ಶ್ರೀ ಪ್ರವೀಣ್ ಸೂದ್, ಐಪಿಎಸ್, ಮಹಾನಿರ್ದೇಶಕರು ಮತ್ತು ಆರಕ್ಷಕ ಮಹಾನಿರೀಕ್ಷಕರು, ಶ್ರೀ ಪದಮ್ ಕುಮಾರ್ ಗರ್ಗ್, ಐಪಿಎಸ್, ಪೊಲೀಸ್ ಮಹಾನಿರ್ದೇಶಕರು, ತರಬೇತಿ ಮತ್ತು ಶ್ರೀ ಕಮಲ್ ಪಂತ್, ಐಪಿಎಸ್, ಪೊಲೀಸ್ ಆಯುಕ್ತರು, ಬೆಂಗಳೂರು ನಗರ ಹಾಗೂ ಡಾ॥ ಎಂ.ಎ. ಸಲೀಂ, ಐಪಿಎಸ್, ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು, ಆಡಳಿತ ರವರು ಉಪಸ್ಥಿತರಿದ್ದರು.

# ಎಫ್.ಎಸ್.ಎಲ್ ನೂತನ ಕಟ್ಟಡ ಉದ್ಘಾಟನೆ:






ರಾಜ್ಯ ನ್ಯಾಯ ವಿಜ್ಞಾನ ಪ್ರಯೋಗಾಲಯ, ಮಡಿವಾಳ, ಬೆಂಗಳೂರು ಇಲ್ಲಿ ನಿರ್ಮಿಸಲಾಗಿರುವ ನೂತನ ಕಟ್ಟಡದ ಉದ್ಘಾಟನೆಯನ್ನು ದಿನಾಂಕ: 27.11.2020 ರಂದು ಕರ್ನಾಟಕ ರಾಜ್ಯದ ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ನೆರವೇರಿಸಿರುತ್ತಾರೆ. ಮಾನ್ಯ ಗೃಹ ಸಚಿವರು ಉಪಸ್ಥಿತರಿದ್ದರು.

ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವುದು ಎಷ್ಟು ಮುಖ್ಯವೋ ಅಪರಾಧಗಳನ್ನು ತಡೆಯುವುದು ಅಷ್ಟೇ ಮುಖ್ಯ. ಅಪರಾಧ ಸ್ಥಳಗಳಲ್ಲಿ ಸಂಗ್ರಹಿಸುವ ಸಾಕ್ಷ್ಯಗಳು ಹಾಗೂ ವೈಜ್ಞಾನಿಕವಾಗಿ ಸಾಬೀತಾದ ಅಂಶಗಳ ಆಧಾರದ ಮೇಲೆ ನ್ಯಾಯಾಲಯಗಳಿಗೆ ವರದಿಗಳನ್ನು ಸಲ್ಲಿಸಲಾಗುತ್ತದೆ ಎಂದು ಮಾನ್ಯ ಮುಖ್ಯಮಂತ್ರಿಗಳು ತಿಳಿಸಿದರು. ಗೃಹ ಸಚಿವರ ಮನವಿಯಂತೆ ಮುಂಬರುವ ಬಜೆಟ್‌ನಲ್ಲಿ ರಾಜ್ಯ ಪೊಲೀಸ್ ಇಲಾಖೆಯ ಆಧುನೀಕರಣಕ್ಕಾಗಿ 100 ಕೋಟಿ ರೂ. ಮೀಸಲಿಡುವುದಾಗಿ ಮಾನ್ಯ ಮುಖ್ಯಮಂತ್ರಿಗಳು ಆಶ್ವಾಸನೆ ನೀಡಿದರು. ಮಾನ್ಯ ಮುಖ್ಯಮಂತ್ರಿಗಳು ನೀಡಿದ ಆಶ್ವಾಸನೆಗೆ ಪೊಲೀಸ್ ರಾಜ್ಯ ಪೊಲೀಸ್ ಮುಖ್ಯಸ್ಥರಾದ ಶ್ರೀ ಪ್ರವೀಣ್ ಸೂದ್, ಐಪಿಎಸ್ ರವರು ಹೃದಯ ಪೂರ್ವಕ ಅಭಿನಂದನೆಗಳನ್ನು ಸಲ್ಲಿಸಿರುತ್ತಾರೆ.

ಪ್ರಾದೇಶಿಕ ನ್ಯಾಯವಿಜ್ಞಾನ ಪ್ರಯೋಗಾಲಯಗಳನ್ನೊಳಗೊಂಡಂತೆ ನ್ಯಾಯವಿಜ್ಞಾನ ಪ್ರಯೋಗಾಲಯದಲ್ಲಿ ಮಹತ್ತರವಾದ ಬದಲಾವಣೆಯಾಗಲಿದೆ. ವೈಜ್ಞಾನಿಕ ಅಧಿಕಾರಿಗಳ ಮತ್ತು ಪ್ರಯೋಗಾಲಯ ಸಹಾಯಕರುಗಳ ನೇಮಕಾತಿಯು ಅಂತಿಮ ಹಂತದಲ್ಲಿದೆ. ಅತ್ಯಾಧುನಿಕ ಸಲಕರಣೆ ಹಾಗೂ ಡಿಎನ್‌ಎ ಮತ್ತು ಸೈಬರ್ ಫೋರೆನ್ಸಿಕ್‌ನ್ನು ಬಲಗೊಳಿಸಲು ಭಾರತ ಸರ್ಕಾರವು ರೂ. 13 ಕೋಟಿಗಳ ಅನುದಾನವನ್ನು ನೀಡಿದೆ. ಇದರಿಂದಾಗಿ ಬಾಕಿ ಇರುವ ಪ್ರಕರಣಗಳ ವಿಲೇವಾರಿಯು ಮುಂದಿನ ದಿನಗಳಲ್ಲಿ ಗಣನೀಯವಾಗಿ ಇಳಿಕೆಯಾಗಲಿದೆ.

# 102 ಪೊಲೀಸ್ ಅಮರ ವೀರರ ಭಾವಚಿತ್ರಗಳ ಪ್ರದರ್ಶನ ಶ್ರದ್ಧಾಂಜಲಿ





ರಾಜ್ಯದಲ್ಲಿ ಕೋವಿಡ್ ಹೋರಾಟದಲ್ಲಿ ಹಾಗೂ ಕರ್ತವ್ಯದ ವೇಳೆ ಅಮರ ವೀರರಾದ 102 ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳ ಭಾವಚಿತ್ರಗಳ ಪ್ರದರ್ಶನದ ಸ್ಮರಣಾಂಜಲಿ ಕಾರ್ಯಕ್ರಮದ ಉದ್ಘಾಟನೆಯನ್ನು ದಿನಾಂಕ 22.10.2020 ರಂದು ಕರ್ನಾಟಕ ಚಿತ್ರಕಲಾ ಪರಿಷತ್‌ನಲ್ಲಿ ಸನ್ಮಾನ್ಯ ಗೃಹ ಸಚಿವರಾದ ಶ್ರೀ ಬಸವರಾಜ ಬೊಮ್ಮಾಯಿರವರು ನೆರವೇರಿಸಿ ಮಾತನಾಡುತ್ತಾ, ಕೊರೊನಾ ಸಂದರ್ಭದಲ್ಲಿ ಜೀವದ ಹಂಗು ತೊರೆದು ಹೋರಾಡಿದ ನಿಜವಾದ ಕೊರೊನಾ ಸೇನಾನಿಗಳೆಂದರೆ, ಕರ್ನಾಟಕ ರಾಜ್ಯ ಪೊಲೀಸರು ಎಂದು ಸ್ಮರಿಸುತ್ತಾ ಎಲ್ಲಾ ಅಮರ ವೀರರಿಗೆ ಗೌರವ ನಮನಗಳನ್ನು ಅರ್ಪಿಸಿದರು.


ಈ ಸಂದರ್ಭದಲ್ಲಿ ಶ್ರೀ ಬಿ.ಎಲ್. ಶಂಕರ್, ಅಧ್ಯಕ್ಷರು, ಕರ್ನಾಟಕ ಚಿತ್ರಕಲಾ ಪರಿಷತ್, ಡಾ|| ರಜನೀಶ್ ಗೋಯೆಲ್, ಐಎಎಸ್, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಒಳಾಡಳಿತ ಇಲಾಖೆ, ಶ್ರೀ ಪ್ರವೀಣ್ ಸೂದ್, ಐಪಿಎಸ್, ರಾಜ್ಯ ಪೊಲೀಸ್ ಪಡೆಯ ಮುಖ್ಯಸ್ಥರು ಮತ್ತು ಶ್ರೀ ಕಮಲ್ ಪಂತ್, ಐಪಿಎಸ್, ಪೊಲೀಸ್ ಆಯುಕ್ತರು, ಬೆಂಗಳೂರು ನಗರ ಹಾಗೂ ಇನ್ನಿತರ ಹಿರಿಯ ಪೊಲೀಸ್ ಅಧಿಕಾರಿಗಳು ಉಪಸ್ಥಿತರಿದ್ದು, ಎಲ್ಲಾ ಅಮರ ವೀರರಿಗೆ ಶ್ರದ್ಧಾಂಜಲಿ ಅರ್ಪಿಸಿದರು.

# ಕರ್ತವ್ಯದ ವೇಳೆ ಹುತಾತ್ಮರಾದ 17 ಪೊಲೀಸರಿಗೆ ಗೌರವ ನಮನ



ದಿನಾಂಕ 21.10.2020 ರಂದು ಮೈಸೂರು ರಸ್ತೆಯ ಸಿಎಆರ್ ಕೇಂದ್ರಸ್ಥಾನದಲ್ಲಿ ನಡೆದ ಪೊಲೀಸ್ ಸಂಸ್ಮರಣ ದಿನಾಚರಣೆಯ ಸಂದರ್ಭದಲ್ಲಿ ಕಳೆದ ಒಂದು ವರ್ಷದಲ್ಲಿ ಕರ್ತವ್ಯ ನಿರ್ವಹಣೆಯ ಅವಧಿಯಲ್ಲಿ ಹುತಾತ್ಮರಾದ 17 ಪೊಲೀಸರ ಸ್ಮರಣೆ ಮಾಡಲಾಗಿದ್ದು, ಶ್ರೀ ಬಿ.ಎಸ್. ಯಡಿಯೂರಪ್ಪ, ಸನ್ಮಾನ್ಯ ಮುಖ್ಯಮಂತ್ರಿಗಳು, ಶ್ರೀ ಬಸವರಾಜ ಬೊಮ್ಮಾಯಿ, ಸನ್ಮಾನ್ಯ ಗೃಹ ಸಚಿವರು, ಶ್ರೀ ಟಿ.ಎಂ. ವಿಜಯ ಭಾಸ್ಕರ್, ಐಎಎಸ್, ಮುಖ್ಯ ಕಾರ್ಯದರ್ಶಿಗಳು, ಡಾ॥ ರಜನೀಶ್ ಗೋಯೆಲ್, ಐಎಎಸ್, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಒಳಾಡಳಿತ ಇಲಾಖೆ, ಶ್ರೀ ಪ್ರವೀಣ್ ಸೂದ್, ಐಪಿಎಸ್, ರಾಜ್ಯ ಪೊಲೀಸ್ ಪಡೆಯ ಮುಖ್ಯಸ್ಥರು, ಶ್ರೀ ಎ.ಎಂ. ಪ್ರಸಾದ್, ಐಪಿಎಸ್, ಪೊಲೀಸ್ ಮಹಾನಿರ್ದೇಶಕರು, ಗೃಹರಕ್ಷಕ ಮತ್ತು ಅಗ್ನಿಶಾಮಕ ಸೇವೆಗಳು ಹಾಗೂ ಇನ್ನಿತರ ಹಿರಿಯ ಮತ್ತು ಕಿರಿಯ ಪೊಲೀಸ್ ಅಧಿಕಾರಿಗಳು ಪುಷ್ಪಮಾಲೆಗಳನ್ನು ಅರ್ಪಿಸಿ ಗೌರವ ನಮನಗಳನ್ನು ಸಲ್ಲಿಸಿದರು.

## ಕೆ.ಎಸ್.ಆರ್.ಪಿಯ 62ನೇ ಸಂಸ್ಥಾಪನಾ ದಿನಾಚರಣೆ



ದಿನಾಂಕ 14-10-2020ರಂದು ಕೋರಮಂಗಲ, ಕೆ.ಎಸ್.ಆರ್.ಪಿ 3ನೇ ಪಡೆ ಕವಾಯತು ಮೈದಾನದಲ್ಲಿ ನಡೆದ " **ಕರ್ನಾಟಕ ರಾಜ್ಯ ಮೀಸಲು ಪೊಲೀಸ್ ಪಡೆಯ 62ನೇ ಸಂಸ್ಥಾಪನಾ ದಿನಾಚರಣೆ** " ಕಾರ್ಯಕ್ರಮಕ್ಕೆ ಶ್ರೀ ಪ್ರವೀಣ್ ಸೂದ್, ಡಿಜಿ ಮತ್ತು ಐಜಿಪಿ ರವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಸಸಿ ನೆಟ್ಟು, ರಕ್ತದಾನ ಶಿಬಿರಕ್ಕೆ ಚಾಲನೆ ನೀಡಿ **"JOIN KSRP"** ವಿಡಿಯೋ ಬಿಡುಗಡೆ ಮಾಡಿ ಮತ್ತು ಕೆ.ಎಸ್.ಆರ್.ಪಿ. 3ನೇ ಪಡೆಯ ಭದ್ರತಾ ಹಿತದೃಷ್ಟಿಯಿಂದ ನೂತನವಾಗಿ **"MY GATE APP"** ಗೆ ಚಾಲನೆ ನೀಡಿರುತ್ತಾರೆ ಹಾಗೂ ಕೆ.ಎಸ್.ಆರ್.ಪಿ.ಯ ವಾರ್ತಾಪತ್ರಿಕೆಯನ್ನು ಬಿಡುಗಡೆ ಮಾಡಿರುತ್ತಾರೆ.

ಇದೇ ಸಂದರ್ಭದಲ್ಲಿ ಪೊಲೀಸ್ ಕಾನ್ಸಟೇಬಲ್‌ಗಳ ನಿರ್ಗಮನ ಪಥಸಂಚಲನದಲ್ಲಿ ಮಾತನಾಡುತ್ತಾ ಸಾಮಾನ್ಯ ದಿನಗಳಲ್ಲೂ ತರಬೇತಿ ನೀಡುವುದು ಕಷ್ಟ. ಆದರೆ ಕೊರೊನಾ ಕಾಲಘಟ್ಟದಲ್ಲೂ ಸುರಕ್ಷತಾ ಕ್ರಮಗಳನ್ನು ಪಾಲಿಸಿಕೊಂಡು 276 ಪೊಲೀಸ್ ಕಾನ್ಸಟೇಬಲ್‌ಗಳಿಗೆ ತರಬೇತಿಯನ್ನು ನೀಡಿದ್ದು, ಎಲ್ಲರೂ ಉತ್ತಮವಾಗಿ ಕಾರ್ಯನಿರ್ವಹಿಸಬೇಕೆಂದು ತಿಳಿಹೇಳಿ ಎಲ್ಲರಿಗೂ ಅಭಿನಂದನೆಗಳನ್ನು ತಿಳಿಸಿರುತ್ತಾರೆ.

## ರಹಸ್ಯ ಶಾಖೆ

ದಿನಾಂಕ 01.09.2020 ರಿಂದ ದಿನಾಂಕ: 30/12/20 ರವರೆಗೆ ಗ್ರೂಪ್-ಎ ಮತ್ತು ಗ್ರೂಪ್ ಬಿ ವೃಂದದ ವಿವಿಧ ದರ್ಜೆಯ ಅಧಿಕಾರಿಗಳಿಗೆ ನೀಡಲಾದ ಮುಂಬಡ್ತಿ ವಿವರ.

| | ಗ್ರೂಪ್-ಎ | |
|---|---|---|
| 1. | ಪೊಲೀಸ್ ಅಧೀಕ್ಷಕರು (ಡಿಟೆಕ್ಟಿವ್) | 05 |
| 2. | ಆಡಳಿತಾಧಿಕಾರಿ | 04 |
| 3. | ಉಪ ನಿರ್ದೇಶಕರು, ನ್ಯಾಯ ವಿಜ್ಞಾನ ಪ್ರಯೋಗಾಲಯ, | 04 |
| 4. | ಡಿವೈಎಸ್‌ಪಿ(ನಿಸ್ತಂತು) | 04 |
| 5. | ಡಿವೈಎಸ್‌ಪಿ (ಸಶಸ್ತ್ರ) | 13 |
| | ಗ್ರೂಪ್-ಬಿ | |
| 6. | ಪಿ.ಐ (ಸಿವಿಲ್) | 02 |
| 7. | ಸಹಾಯಕ ಆಡಳಿತಾಧಿಕಾರಿ | 06 |
| 8. | ಆರ್‌ಪಿಐ ಸಶಸ್ತ್ರ | 39 |
| | ಒಟ್ಟು (ಗ್ರೂಪ್ ಎ & ಬಿ) | 77 |

## ಖಾಯಂ ಮುಂಗಡ

- ಪ್ರಧಾನ ಕಛೇರಿ ನಡವಳಿಗಳಲ್ಲಿ ಪೊಲೀಸ್ ಇಲಾಖೆಯ ವಿವಿಧ ಘಟಕಗಳ ಆಡಳಿತ ನಿರ್ವಹಣೆಗಾಗಿ ತಗಲುವ ವಿವಿಧ ತುರ್ತು ವೆಚ್ಚಗಳನ್ನು ಮತ್ತು ಅಪರಾಧ ಪ್ರಕರಣಗಳ ತನಿಖಾ ಸಂದರ್ಭದಲ್ಲಿ ಹಾಗೂ ವಿವಿಧ ಹುದ್ದೆಗಳ ನೇಮಕಾತಿ ಸಮಯದಲ್ಲಿ ತಗಲುವ ತುರ್ತುವೆಚ್ಚಗಳನ್ನು ಭರಿಸಲು 24 ಘಟಕಾಧಿಕಾರಿಗಳಿಗೆ ಹೊಸದಾಗಿ ಖಾಯಂ ಮುಂಗಡ ಮೊತ್ತವನ್ನು ಮಂಜೂರು ಮಾಡಲಾಗಿದೆ.

## ಪೊಲೀಸ್ ವಸತಿ ಗೃಹ

- ಶಿಥಿಲಾವಸ್ಥೆಯಲ್ಲಿನ ಕಟ್ಟಡಗಳನ್ನು ನೆಲಸಮಗೊಳಿಸುವ, ವಸತಿಗೃಹ ಹಂಚಿಕೆ ಇತ್ಯಾದಿ ಕುರಿತಂತೆ ಪ್ರಧಾನ ಕಚೇರಿಯಿಂದ ಸೂಚನೆಗಳನ್ನು ತಿಳುವಳಿಕಾ ಪತ್ರವನ್ನು ಹೊರಡಿಸಲಾಗಿದೆ.
- ವಸತಿ / ವಸತಿಯೇತರ ಕಟ್ಟಡಗಳ ದುರಸ್ತಿಯು ಬಗ್ಗೆ ಮಾರ್ಗಸೂಚಿಗಳನ್ನು ಎಲ್ಲಾ ಘಟಕಾಧಿಕಾರಿಗಳ ಗಮನಕ್ಕಾಗಿ ಪ್ರಧಾನ ಕಛೇರಿಯಿಂದ ಸುತ್ತೋಲೆ ಹೊರಡಿಸಲಾಗಿದೆ.
- ರಾಜ್ಯದ ವಿವಿಧ ಘಟಕಗಳ ವಸತಿ/ವಸತಿಯೇತರ ಕಟ್ಟಡಗಳ ದುರಸ್ತಿಗಾಗಿ ಆಗಸ್ಟ್ -2020 ರಿಂದ ನವೆಂಬರ್-2020 ರವರೆಗೆ ರೂ.9,98,38,516/-ಗಳ ಅನುದಾನವನ್ನು ಮಂಜೂರು ಮಾಡಲಾಗಿದೆ.
- ಪೊಲೀಸ್ ವಸತಿ ಗೃಹ 2020 ನಿರ್ಮಾಣವು ಮುಕ್ತಾಯ ಹಂತದಲ್ಲಿರುತ್ತದೆ. 11,000 ಪೊಲೀಸ್ ವಸತಿ ಗೃಹಗಳ ಪೈಕಿ 686 ಹೊರತುಪಡಿಸಿ, ಎಲ್ಲಾ ವಸತಿ ಗೃಹಗಳನ್ನು ಈಗಾಗಲೇ ಹಸ್ತಾಂತರಿಸಲಾಗಿದೆ. ನಾವು ಪೊಲೀಸ್ ವಸತಿ ಗೃಹ- 2025 ರಡಿಯಲ್ಲಿ ಪೊಲೀಸ್ ಅಧಿಕಾರಿ /ಸಿಬ್ಬಂದಿಗಳಿಗಾಗಿ ಒಳ್ಳೆಯ ಗುಣಮಟ್ಟದ 11,000- ವಸತಿ ಗೃಹಗಳನ್ನು ನಿರ್ಮಿಸಲು ಮುಂದಾಗಿದ್ದೇವೆ. ಐದು ವರ್ಷಗಳ ಅವಧಿಯಲ್ಲಿ ಅಂದಾಜು ರೂ. 2700 ಕೋಟಿ ವೆಚ್ಚದಲ್ಲಿ ನಿರ್ಮಾಣವಾಗಲಿದೆ. ಇದು ನಮ್ಮ ವಸತಿಗೃಹ ಲಭ್ಯತೆಯ ತೃಪ್ತಿಕರ ಪ್ರಮಾಣವನ್ನು ಶೇಕಡಾ 60 ಕ್ಕೆ ಒಯ್ಯಲಿದೆ.

## ಆರೋಗ್ಯ ಭಾಗ್ಯ ಯೋಜನೆ

- ಆರೋಗ್ಯ ಭಾಗ್ಯ ಯೋಜನೆಯಡಿ ಪೊಲೀಸ್ ಅಧಿಕಾರಿ/ಸಿಬ್ಬಂದಿಗಳಿಗೆ ಹಾಗೂ ಅವರ ಅವಲಂಬಿತ ಕುಟುಂಬದವರಿಗೆ ವೈದ್ಯಕೀಯ ಚಿಕಿತ್ಸೆ ಸೌಲಭ್ಯವನ್ನು ಒದಗಿಸಲು ಆಗಸ್ಟ್ -2020 ರಿಂದ ನವೆಂಬರ್-2020 ರವರೆಗೆ ರೂ.47,32,51,126/- ಗಳನ್ನು ವಿವಿಧ ನೆಟ್‌ವರ್ಕ್ ಆಸ್ಪತ್ರೆಗಳಿಗೆ ಪಾವತಿಸಲಾಗಿದೆ.
- ನಿವೃತ್ತ ಪೊಲೀಸ್ ಅಧಿಕಾರಿ/ಸಿಬ್ಬಂದಿಗಳಿಗೆ ಹಾಗೂ ಅವರ ಅವಲಂಬಿತ ಕುಟುಂಬದವರಿಗೆ ಆರೋಗ್ಯ ಭಾಗ್ಯ ಯೋಜನೆಯಡಿ ವೈದ್ಯಕೀಯ ಚಿಕಿತ್ಸೆ ಸೌಲಭ್ಯವನ್ನು ಒದಗಿಸಲು ಆಗಸ್ಟ್ -2020 ರಿಂದ ನವೆಂಬರ್-2020 ರವರೆಗೆ ರೂ.3,67,76,338/- ಗಳನ್ನು ವಿವಿಧ ನೆಟ್‌ವರ್ಕ್ ಆಸ್ಪತ್ರೆಗಳಿಗೆ ಪಾವತಿಸಲಾಗಿದೆ.

## ಪೊಲೀಸ್ ಮೆಮೋರಿಯಲ್ ಪಾರ್ಕ್



ಕರ್ತವ್ಯದಲ್ಲಿ ಹುತಾತ್ಮರಾದ ಪೊಲೀಸ್ ಅಧಿಕಾರಿ/ ಸಿಬ್ಬಂದಿಗಳ ಹೆಸರಿನಲ್ಲಿ ನೃಪತುಂಗ ರಸ್ತೆಯಲ್ಲಿರುವ ಪೊಲೀಸ್ ಕಾರ್ನರ್‌ನಲ್ಲಿ ನೂತನವಾಗಿ ನವೀಕೃತಗೊಳಿಸಿದ, ಪೊಲೀಸ್ ಮೆಮೋರಿಯಲ್ ಪಾರ್ಕ್ ಅನ್ನು ಪ್ರತಿನಿತ್ಯ ಬೆಳಿಗ್ಗೆ 8.00 ರಿಂದ ರಾತ್ರಿ 8.00 ರವರೆಗೆ ಸಾರ್ವಜನಿಕರು ವೀಕ್ಷಿಸಲು ಅನುವಾಗುವಂತೆ ಮಾನ್ಯ ಡಿಜಿ ಮತ್ತು ಐಜಿಪಿ ರವರು ಅವಕಾಶ ಕಲ್ಪಿಸಿರುತ್ತಾರೆ.



## ಪೊಲೀಸ್ ನೇಮಕಾತಿ ವಿಭಾಗ

ಪೊಲೀಸ್ ಕಾನ್ಸ್‌ಟೇಬಲ್ ಮತ್ತು ಪೊಲೀಸ್ ಸಬ್ -ಇನ್ಸ್‌ಪೆಕ್ಟರ್ ವೃಂದದ ಎಲ್ಲಾ ಹುದ್ದೆಗಳಿಗೆ ಆಯ್ಕೆಯಾಗುವ ಅಭ್ಯರ್ಥಿಗಳ ಎಸ್.ಎಸ್.ಎಲ್.ಸಿ/ ಪಿ.ಯು.ಸಿ/ತತ್ಸಮಾನ ವಿದ್ಯಾರ್ಹತೆಯ ಅಂಕಪಟ್ಟಿಗಳ ನೈಜತೆಯನ್ನು ತಿಳಿದುಕೊಳ್ಳಲು ಇಲಾಖೆಯ ನೇಮಕಾತಿ ವಿಭಾಗದ ಸಹಯೋಗದೊಂದಿಗೆ Digilocker ತಂತ್ರಾಂಶವನ್ನು ಅಭಿವೃದ್ಧಿ ಪಡಿಸಲಾಗಿರುತ್ತದೆ. ಎಲ್ಲಾ ಘಟಕಾಧಿಕಾರಿಗಳು Digilocker ತಂತ್ರಾಂಶವನ್ನು ಕಡ್ಡಾಯವಾಗಿ ಬಳಕೆ ಮಾಡಲು ಪ್ರಧಾನ ಕಛೇರಿ ಸುತ್ತೋಲೆಯಲ್ಲಿ ಸೂಚಿಸಲಾಗಿದೆ.

ಪೊಲೀಸ್ ಕಾನ್ಸ್‌ಟೇಬಲ್ ಹಾಗೂ ಪೊಲೀಸ್ ಸಬ್-ಇನ್ಸ್‌ಪೆಕ್ಟರ್ ಸಿವಿಲ್/ ಸಶಸ್ತ್ರ/ ಎಫ್‌ಪಿಬಿ/ ವೈರ್‌ಲೆಸ್/ ಕೆ.ಎಸ್.ಆರ್.ಪಿ/ ಕೆಎಸ್ಐಎಸ್ಎಫ್ ಹುದ್ದೆಗಳ ನೇಮಕಾತಿ ಸಮಯದಲ್ಲಿ ಸಿಂಧುತ್ವ ಪ್ರಮಾಣ ಪತ್ರ ಪಡೆಯುವ ಪ್ರಕ್ರಿಯೆಯನ್ನು ಸರಳೀಕೃತಗೊಳಿಸುವ ಮತ್ತು ತ್ವರಿತಗೊಳಿಸುವ ದೃಷ್ಟಿಯಿಂದ ಸೇವಾಸಿಂಧು ಯೋಜನೆಯಡಿ ತಂತ್ರಾಂಶ ಆಧಾರಿತ ಇ-ಸಿಂಧುತ್ವ ಪ್ರಮಾಣ ಪತ್ರವನ್ನು ನೀಡುವ ಮಾಹಿತಿ ತಂತ್ರಜ್ಞಾನ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಲಾಗಿದೆ. ಎಲ್ಲಾ ಘಟಕಾಧಿಕಾರಿಗಳು ಆಯ್ಕೆಯಾದ ಅಭ್ಯರ್ಥಿಗಳ ಸಿಂಧುತ್ವ ಪ್ರಮಾಣ ಪತ್ರವನ್ನು ಇ-ಸಿಂಧುತ್ವ ತಂತ್ರಾಂಶದ ಮೂಲಕ ಪಡೆಯಲು ಕ್ರಮ ಕೈಗೊಳ್ಳುವಂತೆ ಪ್ರಧಾನ ಕಛೇರಿ ಸುತ್ತೋಲೆಯಲ್ಲಿ ಎಲ್ಲಾ ಘಟಕಾಧಿಕಾರಿಗಳಿಗೆ ಸೂಚಿಸಲಾಗಿದೆ.

2020 ನೇ ಸಾಲಿನಲ್ಲಿ 500-ಪಿ.ಎಸ್.ಐ (ಸಿವಿಲ್), 40-ಆರ್.ಎಸ್.ಐ, ಹಾಗೂ 40-ಆರ್.ಎಸ್.ಐ (ಸ್ಪೆಷಲ್), ಹುದ್ದೆಗಳನ್ನು ನೇಮಕಾತಿ ಮಾಡಿರುತ್ತೇವೆ. ಇದರ ಜೊತೆಗೆ 2018-19, 2019-20 ಮತ್ತು 2020-21 ನೇ ಸಾಲಿನ ಪೊಲೀಸ್ ಕಾನ್ಸ್‌ಟೇಬಲ್‌ಗಳ ನೇಮಕಾತಿಯನ್ನು ಏಪ್ರಿಲ್-2021 ರೊಳಗಾಗಿ ಮುಕ್ತಾಯಗೊಳಿಸಲಾಗುವುದು. ನೇಮಕಾತಿ ವಿಭಾಗದ ನವೀನ ಹೆಜ್ಜೆಯಿಂದಾಗಿ ಅಧಿಸೂಚನೆ ಹೊರಡಿಸುವ ಮತ್ತು ನೇಮಕಾತಿ ಮಾಡಿಕೊಳ್ಳುವ ನಡುವಿನ ಅವಧಿಯನ್ನು 50% ರಷ್ಟು ಇಳಿಸಲಾಗಿದೆ. ಇದರಿಂದಾಗಿ ಮಾರ್ಚ್ 2021 ರ ಅಂತ್ಯಕ್ಕೆ ರಿಕ್ತಸ್ಥಾನಗಳು 23% ದಿಂದ 15% ಕ್ಕೆ ಇಳಿಕೆಯಾಗಲಿವೆ.

**ಈ ಕೆಳಕಂಡ ವೃಂದದ ಹುದ್ದೆಗಳ ನೇಮಕಾತಿಗಾಗಿ ಲಿಖಿತ ಪರೀಕ್ಷೆಯನ್ನು ಪೂರ್ಣಗೊಳಿಸಿ, ನೇಮಕಾತಿ ಆದೇಶವನ್ನು ಹೊರಡಿಸಲಾಗಿರುತ್ತದೆ.**

**(ಡಿಸೆಂಬರ್ ಅಂತ್ಯಕ್ಕೆ)**

| ಕ್ರಮ. ಸಂ | ವೃಂದವಾರು ವಿವರ | ಹುದ್ದೆಗಳ ಸಂಖ್ಯೆ |
|---|---|---|
| 1 | ಪೊಲೀಸ್ ಸಬ್ ಇನ್ಸ್‌ಪೆಕ್ಟರ್ (ಸಿವಿಲ್) (ಪುರುಷ ಮತ್ತು ಮಹಿಳೆ) ಹಾಗೂ ಸೇವಾನಿರತ | 500 |
| 2 | ವಿಶೇಷ ರಿಸರ್ವ್ ಸಬ್-ಇನ್ಸ್‌ಪೆಕ್ಟರ್ (ಸಿಎಆರ್/ಡಿಎಆರ್) | 40 |

## ಸಂಗ್ರಹ ಶಾಖೆ

ಪೊಲೀಸ್ ಇಲಾಖೆಯ ಅಧಿಕಾರಿ/ ಸಿಬ್ಬಂದಿಯವರಿಗೆ (ಪಿಎಸ್ಐ ಹುದ್ದೆಯಿಂದ ಪಿಸಿ ಹುದ್ದೆಯವರೆಗೆ) ವಿತರಿಸಲಾಗುತ್ತಿರುವ **ವಿವಿಧ ಬಗೆಯ ಸಮವಸ್ತ್ರ ಮತ್ತು ಕಿಟ್ ಸಾಮಗ್ರಿಗಳನ್ನು ಹಾಲಿ ನಿರುಪಯುಕ್ತಗೊಳಿಸಿ** ವಿಲೇವಾರಿ ಮಾಡಲು ಈಗಿರುವ ಸರ್ಕಾರದ ಆದೇಶಗಳನ್ನು ರದ್ದುಗೊಳಿಸಿ, ಪ್ರಸ್ತುತ ನಿಗದಿಪಡಿಸಿರುವ ವಿತರಣಾ ಅವಧಿಯಾನುಸಾರ ಅವಧಿ ಮೀರಿದ ಸಾಮಗ್ರಿಗಳನ್ನು ಸಂಬಂಧಿಸಿದ ಸಿಬ್ಬಂದಿಗಳಿಗೆ ವಿತರಿಸಿ ವಿಲೇವಾರಿ ಮಾಡಲು ಸರ್ಕಾರವು ಮಂಜೂರಾತಿ ನೀಡಿರುತ್ತದೆ.

**ಓದುಗರಿಗೆ**

ಪೊಲೀಸ್ ಇಲಾಖೆಯ ವತಿಯಿಂದ ಹೊರಬರುತ್ತಿರುವ 'ವಾರ್ತಾ ಪತ್ರಿಕೆ'ಗೆ ಘಟಕಾಧಿಕಾರಿಗಳು ತಮ್ಮ ಘಟಕಗಳಲ್ಲಿ, ಜಿಲ್ಲೆ / ನಗರಗಳಲ್ಲಿ ನಡೆದ ಪ್ರಮುಖ ಸಮಾರಂಭಗಳು/ ನೂತನವಾಗಿ ಪ್ರಾರಂಭಿಸಲಾದ ಕಾರ್ಯಕ್ರಮಗಳು / ಕಾನೂನು ಸುವ್ಯವಸ್ಥೆ, ಸಿಬ್ಬಂದಿ ಸುಧಾರಣೆ, ಸಂಚಾರಕ್ಕೆ ಸಂಬಂಧಪಟ್ಟಂತಹ ಪ್ರಮುಖ ವಿಷಯಗಳು, ತಂತ್ರಜ್ಞಾನ, ನೂತನ ಉಪಕರಣಗಳ ಬಳಕೆ, ಶ್ಲಾಘನೀಯ ಸೇವೆ ಮಾಡಿದ ಸಿಬ್ಬಂದಿಗಳ ಉತ್ತಮ ಕಾರ್ಯ, ನಿವೃತ್ತರಾದ ಅಧಿಕಾರಿ / ಸಿಬ್ಬಂದಿಗಳ ಫೋಟೋ ಗಳೊಂದಿಗೆ **50 ರಿಂದ 150** ಪದಗಳೊಳಗೆ ವಿವರಗಳನ್ನು kspnewsletter@ksp.gov.in ಇ-ಮೇಲ್ ಐ.ಡಿ ಗೆ ಆಯಾ ತಿಂಗಳ ಅಂತ್ಯದೊಳಗೆ ಕಳುಹಿಸಬಹುದಾಗಿದೆ. ಸೂಕ್ತವಾದ ವರದಿಗಳನ್ನು ಪ್ರಕಟಿಸಲಾಗುವುದು. ಈ ವಾರ್ತಾ ಪತ್ರಿಕೆಯನ್ನು ಇನ್ನೂ ಉತ್ತಮ ಪಡಿಸಲು ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ತಮ್ಮ ಅನಿಸಿಕೆ ಹಾಗೂ ಅಭಿಪ್ರಾಯಗಳನ್ನು ಸಹ ಕಳುಹಿಸಬಹುದಾಗಿರುತ್ತದೆ.

## ಅಪರಾಧ ಮತ್ತು ತಾಂತ್ರಿಕ ಸೇವೆಗಳು

### • ಮಾದರಿಗಳನ್ನು ಎಫ್.ಎಸ್.ಎಲ್. ಗೆ ಕಳುಹಿಸುವ ಬಗ್ಗೆ:-

➤ ಪ್ರಧಾನ ಕಛೇರಿಯ ಸ್ಥಾಯಿ ಆದೇಶದಲ್ಲಿ ಅಪರಾಧ ಪ್ರಕರಣಗಳಲ್ಲಿ ಸಂಗ್ರಹಿಸಿರುವ ಮಾದರಿಗಳನ್ನು after completing legal formalities 15 ದಿನಗಳೊಳಗಾಗಿ ಎಫ್‌ಎಸ್‌ಎಲ್ ಪರೀಕ್ಷೆಗೆ ಕಳುಹಿಸತಕ್ಕದ್ದು, 30 ದಿನಗಳಾದಲ್ಲಿ ಪೊಲೀಸ್ ಅಧೀಕ್ಷಕರು/ ಡಿಸಿಪಿ ಮಟ್ಟದ ಅಧಿಕಾರಿಗಳು ಖುದ್ದು ಸಹಿ ಮಾಡಿದ ಪತ್ರದೊಂದಿಗೆ ಕಳುಹಿಸತಕ್ಕದ್ದು. 30 ದಿನಗಳ ನಂತರ ಮಾದರಿಗಳನ್ನು ಎಫ್‌ಎಸ್‌ಎಲ್‌ಗೆ ಕಳುಹಿಸಬೇಕಾದಲ್ಲಿ ಅಪರ ಪೊಲೀಸ್ ಮಹಾನಿರ್ದೇಶಕರು, ಅಪರಾಧ ಮತ್ತು ತಾಂತ್ರಿಕ ಸೇವೆಗಳು ರವರಿಂದ ಅನುಮೋದನೆ ಪಡೆಯತಕ್ಕದ್ದು. ಎಲ್ಲಾ ಅಪರಾಧ ಪ್ರಕರಣಗಳಲ್ಲಿ ಅಪರಾಧಿಯು ಮರಣ ಹೊಂದಿದ್ದಲ್ಲಿ ಅಥವಾ " ಬಿ" ರಿಪೋರ್ಟ್ ಸಲ್ಲಿಸಿದ್ದಲ್ಲಿ ಅಂತಹ ವರದಿಗಳು **becomes infructuous** ಆಗುತ್ತವೆ. ಅಂತಹ ಮಾಹಿತಿಯನ್ನು ಕೂಡಲೇ ಎಫ್‌ಎಸ್‌ಎಲ್ ಗೆ ಮಾಹಿತಿಯನ್ನು ನೀಡತಕ್ಕದ್ದು ಎಂದು ಸೂಚನೆಯನ್ನು ನೀಡಲಾಗಿರುತ್ತದೆ.

### • ಮಹಿಳೆಯರ ವಿರುದ್ಧದ ದೌರ್ಜನ್ಯ ಪ್ರಕರಣಗಳ ತನಿಖೆಯ ಬಗ್ಗೆ:

➤ ಪ್ರಧಾನ ಕಛೇರಿ ಸುತ್ತೋಲೆಯಲ್ಲಿ ಮಹಿಳೆಯ ವಿರುದ್ಧದ ದೌರ್ಜನ್ಯ ಪ್ರಕರಣಗಳ ತನಿಖೆಯನ್ನು ನಡೆಸಲು ಕೆಲವೊಂದು Standard Operating Procedures ಅನ್ನು ನಿಗದಿಗೊಳಿಸಲಾಗಿರುತ್ತದೆ. ಎಲ್ಲಾ ತನಿಖಾಧಿಕಾರಿಗಳು ಇದನ್ನು ಕಟ್ಟುನಿಟ್ಟಾಗಿ ಪಾಲಿಸುವುದು.

### • ಪೊಲೀಸ್ ಮ್ಯಾನ್ಯುಯಲ್ ತಿದ್ದುಪಡಿ:

➤ ಸರ್ಕಾರದ ಆದೇಶದಲ್ಲಿ **ಘೋರ ಅಪರಾಧಗಳಿಗೆ** ಸಂಬಂಧಿಸಿದಂತೆ, ಪೊಲೀಸ್ ಮ್ಯಾನುಯಲ್ ಭಾಗ-1, ಅಧ್ಯಾಯ 5 ರ ಕಂಡಿಕೆ 153(5), 153(6) ಮತ್ತು 153(18) ಗಳನ್ನು ಈ ಕೆಳಕಂಡಂತೆ ಮಾರ್ಪಡಿಸಿ ಆದೇಶಿಸಲಾಗಿದೆ.

Order No. 153

5) H.B. and theft of articles valued above Rs. 1,50,000/-

6) Theft of articles valued above Rs. 5,00,000/-

18) Serious fire accident involving loss of property worth Rs. 2,50,000/- and above or involving loss of human life or both.

## ERSS ಯೋಜನೆ

ಪ್ರಸ್ತುತ ERSS-112 ಯೋಜನೆಯನ್ನು ಒಟ್ಟು 12 ಜಿಲ್ಲೆ ಮತ್ತು 04 ಕಮೀಷನರೇಟ್‌ಗಳಲ್ಲಿ ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಗೊಳಿಸಲಾಗಿರುತ್ತದೆ. ಈ ಯೋಜನೆಗೆ ಸಾರ್ವಜನಿಕರಿಂದ ಉತ್ತಮ ಪ್ರತಿಕ್ರಿಯೆ ಲಭ್ಯವಾಗಿರುತ್ತದೆ.

## ಸರ್ಕಾರದ ಹಣದ ದುರುಪಯೋಗ ತಡೆಗಟ್ಟುವ ಬಗ್ಗೆ:-

ಪ್ರಧಾನ ಕಛೇರಿ ಸುತ್ತೋಲೆಯಲ್ಲಿ ಹಣಕಾಸಿನ ವಹಿವಾಟುಗಳಲ್ಲಿ ಸರ್ಕಾರದ ಹಣದ ದುರುಪಯೋಗವನ್ನು ತಡೆಗಟ್ಟಲು ಸೂಕ್ಷ್ಮವಾದ ಮೇಲ್ವಿಚಾರಣೆಯನ್ನು ಕೈಗೊಳ್ಳಲು ಮಾರ್ಗಸೂಚಿಗಳನ್ನು ಹೊರಡಿಸಿದ್ದು, ಹಣದ ದುರುಪಯೋಗ ತಡೆಗಟ್ಟಲು ಘಟಕಾಧಿಕಾರಿಗಳು ವಿಫಲರಾದಲ್ಲಿ ಮತ್ತು ನಿಯಮಗಳ ಉಲ್ಲಂಘನೆಯಾದಲ್ಲಿ ಗಂಭೀರವಾಗಿ ಪರಿಗಣಿಸಿ, ನಿಯಮಾನುಸಾರ ಸಂಬಂಧಪಟ್ಟ ಅಧಿಕಾರಿ/ಸಿಬ್ಬಂದಿಗಳ ವಿರುದ್ಧ ಶಿಸ್ತು ಕ್ರಮವನ್ನು ಜರುಗಿಸಲು ಸೂಚಿಸಲಾಗಿದೆ.

## *Petro Card*

ಪ್ರಧಾನ ಕಛೇರಿ ಸೇರಿದಂತೆ ಇತರೆ ಘಟಕಗಳಲ್ಲಿನ ವಾಹನಗಳಿಗೆ Petro Card ಮುಖೇನ ಇಂಧನ ಮತ್ತು ತೈಲವನ್ನು **M/s Indian Oil Corporation Limited** ನಿಂದ ಖರೀದಿಸಲು ಸರ್ಕಾರವು ಅನುಮೋದನೆ ನೀಡಿ ಸರ್ಕಾರವು ಆದೇಶಿಸಿರುತ್ತದೆ. ಈ ಯೋಜನೆಯು ಜನವರಿ 2021ನೇ ಸಾಲಿನಿಂದ ಅನುಷ್ಠಾನಗೊಳ್ಳಲಿದೆ.

## ಹೊಸ ಮಂಜೂರಾತಿ

- ಬೆಂಗಳೂರು ನಗರದ ಕೆ.ಆರ್.ಪುರಂ ಸಂಚಾರ ಪೊಲೀಸ್ ಠಾಣೆ, ವೈಟ್‌ಫೀಲ್ಡ್ ಸಂಚಾರ ಪೊಲೀಸ್ ಠಾಣೆ ಮತ್ತು ಹೆಚ್.ಎ.ಎಲ್. ಸಂಚಾರ ಪೊಲೀಸ್ ಠಾಣೆಗಳನ್ನು ಸೇರಿಸಿ ನೂತನ ಸಂಚಾರ ವೈಟ್ ಫೀಲ್ಡ್ ಉಪ ವಿಭಾಗ ಕಛೇರಿಯನ್ನು ಸೃಜಿಸಲು ಸರ್ಕಾರವು ಮಂಜೂರಾತಿ ನೀಡಿ ಆದೇಶಿಸಿರುತ್ತದೆ.
- ಪೊಲೀಸ್ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಬೆರಳಚ್ಚುಗಾರರ ಹುದ್ದೆಗಳ ಸಂಖ್ಯೆಯನ್ನು ಪರಿಷ್ಕರಣೆ ಮಾಡುವ ಷರತ್ತಿಗೊಳಪಟ್ಟು ಪೊಲೀಸ್ ಇಲಾಖೆಯಲ್ಲಿ ಖಾಲಿ ಇರುವ ಬೆರಳಚ್ಚುಗಾರರ ಹುದ್ದೆಗಳನ್ನು ರದ್ದುಗೊಳಿಸಿ, ದ್ವಿತೀಯ ದರ್ಜೆ ಸಹಾಯಕ ಹುದ್ದೆಗಳನ್ನು ಸೃಜಿಸಲು ಸರ್ಕಾರವು ಮಂಜೂರಾತಿ ನೀಡಿ ಆದೇಶಿಸಿರುತ್ತದೆ.
- ಬೆಂಗಳೂರು ನಗರದಲ್ಲಿ ಹೊಸದಾಗಿ ಗೋವಿಂದಪುರ ಪೊಲೀಸ್ ಠಾಣೆಯನ್ನು ಸೃಜಿಸಲು ಮತ್ತು ಕೆ.ಜಿ.ಹಳ್ಳಿ, ಡಿ.ಜೆ.ಹಳ್ಳಿ ಮತ್ತು ಗೋವಿಂದಪುರ ಪೊಲೀಸ್ ಠಾಣೆಗಳನ್ನು ಸೇರಿಸಿ, ಕೆ.ಜಿ.ಹಳ್ಳಿ ಉಪವಿಭಾಗವನ್ನು ಸೃಜಿಸಲು ಸರ್ಕಾರವು ಮಂಜೂರಾತಿ ನೀಡಿ ಆದೇಶಿಸಿರುತ್ತದೆ.

### ನ್ಯಾಯ ವಿಜ್ಞಾನ ಪ್ರಯೋಗಾಲಯದ ಅಧಿಕಾರಿಗಳ ಮರುಪದನಾಮ:-

ನ್ಯಾಯ ವಿಜ್ಞಾನ ಪ್ರಯೋಗಾಲಯದ ಹಿರಿಯ ವೈಜ್ಞಾನಿಕ ಅಧಿಕಾರಿ ಹುದ್ದೆಯನ್ನು (2012 ರ ವೇತನ ಶ್ರೇಣಿ ರೂ. 24,000-45,300) Senior Scientific Officer-cum-Asst Chemical Examiner to the Government of Karnataka, ಮತ್ತು ವೈಜ್ಞಾನಿಕ ಅಧಿಕಾರಿ ಹುದ್ದೆಯನ್ನು (2012 ರ ವೇತನ ಶ್ರೇಣಿ ರೂ. 21,600-40,050) Scientific Officer-cum-Asst Chemical Examiner to the Government of Karnataka, ಎಂದು ಮರುಪದನಾಮೀಕರಿಸಿ ಸರ್ಕಾರವು ಆದೇಶಿಸಿರುತ್ತದೆ.

## ಆಂತರಿಕ ಭದ್ರತಾ ವಿಭಾಗ




- ಭಯೋತ್ಪಾದಕ ನಿಗ್ರಹ ಕೇಂದ್ರದ (ಸಿಸಿಟಿ) **"ಗರುಡ"** ಪಡೆಯು ರಾಜ್ಯದಲ್ಲಿ ಭಯೋತ್ಪಾದಕರಿಂದ ಸಂಭವಿಸಬಹುದಾದ ಯಾವುದೇ ರೀತಿಯ ವಿಧ್ವಂಸಕ ಕೃತ್ಯವನ್ನು ನಿಗ್ರಹಿಸಲು ಸದಾ ಸಿದ್ಧವಿರುವ ಒಂದು ಸುಸಜ್ಜಿತ ಘಟಕವಾಗಿದೆ.
- ಈ ಹಿಂದೆ ಎನ್‌ಎಸ್‌ಜಿ ಮತ್ತು ಸಿಐಎಸ್‌ಎಫ್ ಘಟಕಗಳೊಂದಿಗೆ ಸೇರಿ ಹಲವಾರು ಅಣುಕು ಪ್ರದರ್ಶನಗಳಲ್ಲಿ ಸಿಸಿಟಿ ಘಟಕವು ಪಾಲ್ಗೊಂಡಿರುತ್ತದೆ.
- ಅದರಂತೆ ಶ್ರೀ ಭಾಸ್ಕರ್‌ರಾವ್, ಐಪಿಎಸ್, ಎಡಿಜಿಪಿ, ಐಎಸ್‌ಡಿ ರವರ ಆದೇಶದಂತೆ ದಿನಾಂಕ: 14/12/2020ರಂದು 52ನೇ ಸ್ಪೆಷಲ್ ಆ್ಯಕ್ಷನ್ ಗ್ರೂಪ್ (ಎನ್‌ಎಸ್‌ಜಿ) ರವರಿಂದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಗರುಡ ಪಡೆಯ ಸಹಯೋಗದೊಂದಿಗೆ **ಕೌಂಟರ್ ಹೈಜಾಕ್** MOCK EXERCISE ಅನ್ನು ಹಮ್ಮಿಕೊಳ್ಳಲಾಗಿತ್ತು. ಈ ಅಣಕು ಕಾರ್ಯಚರಣೆಯಲ್ಲಿ ಬ್ರಿಗೇಡಿಯರ್ ಬುಬೇಶ್‌ಕುಮಾರ್ ಎಸ್.ಎಸ್.ಎಂ. ರವರ ನೇತೃತ್ವದಲ್ಲಿ ಗರುಡ ಪಡೆಯ ಒಟ್ಟು 33 ಜನ ಅಧಿಕಾರಿ ಮತ್ತು ಕಮಾಂಡೋಗಳು ಸಕ್ರಿಯವಾಗಿ ಪಾಲ್ಗೊಂಡಿರುತ್ತಾರೆ.

# ಮೈಸೂರು ನಗರ ಪೊಲೀಸ್ ಆಯುಕ್ತರ ಕಛೇರಿಯ ನೂತನ ಕಟ್ಟಡ ಉದ್ಘಾಟನೆ





ದಿನಾಂಕ 24-11-2020 ರಂದು ಮೈಸೂರು ನಗರ ಪೊಲೀಸ್ ಆಯುಕ್ತರ ನೂತನ ಕಟ್ಟಡ ಹಾಗೂ 108 ನೂತನ ಪೊಲೀಸ್ ವಸತಿ ಗೃಹಗಳ ಉದ್ಘಾಟನೆಯನ್ನು ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪನವರು ನೆರವೇರಿಸಿ, ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯ ರಕ್ಷಣೆ ಸರ್ಕಾರದ ಪ್ರಮುಖ ಆದ್ಯತೆಯಾಗಿದ್ದು, ಈ ನಿಟ್ಟಿನಲ್ಲಿ ಶ್ರಮಿಸುತ್ತಿರುವ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಎಲ್ಲಾ ಅಗತ್ಯ ವಸತಿ ವ್ಯವಸ್ಥೆ ಕಲ್ಪಿಸಲು ಸರ್ಕಾರ ಬದ್ಧವಾಗಿದೆ ಎಂದು ಹೇಳಿದರು.

## ಹಿರಿಯ ಪೊಲೀಸ್ ಅಧಿಕಾರಿಗಳಿಗೆ ಬೀಳ್ಕೊಡುಗೆ



ಶ್ರೀ ಎ.ಎಂ. ಪ್ರಸಾದ್



ಡಾ॥ ಆರ್.ಪಿ. ಶರ್ಮ



ಶ್ರೀ ಟಿ. ಸುನೀಲ್ ಕುಮಾರ್



ಡಾ॥ಎಸ್.ಪರಶಿವಮೂರ್ತಿ

### 2020ನೇ ಸಾಲಿನ ಸೆಪ್ಟೆಂಬರ್ ನಿಂದ ಡಿಸೆಂಬರ್ ರವರೆಗೆ ನಿವೃತ್ತರಾದ ಕರ್ನಾಟಕ ರಾಜ್ಯದ ಹಿರಿಯ ಪೊಲೀಸ್ ಅಧಿಕಾರಿಗಳು

1. **ಶ್ರೀ ಅಶಿತ್ ಮೋಹನ್ ಪ್ರಸಾದ್,** ಪೊಲೀಸ್ ಮಹಾನಿರ್ದೇಶಕರು,
2. **ಡಾ॥ ರಾಜವೀರ್ ಪ್ರತಾಪ್ ಶರ್ಮ,** ಪೊಲೀಸ್ ಮಹಾನಿರ್ದೇಶಕರು,
3. **ಶ್ರೀ ಟಿ. ಸುನೀಲ್ ಕುಮಾರ್,** ಪೊಲೀಸ್ ಮಹಾನಿರ್ದೇಶಕರು,
4. **ಡಾ॥ ಎಸ್. ಪರಶಿವಮೂರ್ತಿ,** ಅಪರ ಪೊಲೀಸ್ ಮಹಾನಿರ್ದೇಶಕರು,

ಇಲಾಖೆಯಲ್ಲಿ ಸುದೀರ್ಘ ಸೇವೆ ಸಲ್ಲಿಸಿದ ಪೊಲೀಸ್ ಮಹಾನಿರ್ದೇಶಕರಾದ ಶ್ರೀ ಅಶಿತ್ ಮೋಹನ್ ಪ್ರಸಾದ್ ಮತ್ತು ಶ್ರೀ ಟಿ. ಸುನೀಲ್ ಕುಮಾರ್ ರವರುಗಳಿಗೆ ದಿನಾಂಕ: 31/10/2020 ಕೋರಮಂಗಲದ ಕೆಎಸ್‌ಆರ್‌ಪಿ ಕವಾಯತು ಮೈದಾನದಲ್ಲಿ ಬೀಳ್ಕೊಡುಗೆ ಕವಾಯತು ನೀಡಿ ಗೌರವಿಸಲಾಯಿತು.

ಅಪರ ಪೊಲೀಸ್ ಮಹಾನಿರ್ದೇಶಕರಾಗಿ ಸೇವೆ ಸಲ್ಲಿಸಿದ ಡಾ॥ ಎಸ್. ಪರಶಿವಮೂರ್ತಿ ರವರಿಗೆ ಪೊಲೀಸ್ ಪ್ರಧಾನ ಕಛೇರಿಯಲ್ಲಿ ಬೀಳ್ಕೊಡುಗೆ ನೀಡಿ ಗೌರವಿಸಲಾಯಿತು.

## ನಿರ್ಭಯ ಯೋಜನೆ ಅಡಿಯಲ್ಲಿ ರಾಜ್ಯ ಪೊಲೀಸ್ ಇಲಾಖೆಗೆ 751 ದ್ವಿಚಕ್ರ ವಾಹನಗಳ ಲೋಕಾರ್ಪಣೆ



ದಿನಾಂಕ 11-11-2020 ರಂದು ಬೆಳಿಗ್ಗೆ ವಿಧಾನಸೌಧದಲ್ಲಿ ನಡೆದ ಸಮಾರಂಭದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು 751 ದ್ವಿಚಕ್ರ ವಾಹನಗಳನ್ನು ರಾಜ್ಯ ಪೊಲೀಸ್ ಪಡೆಯ ಮುಖ್ಯಸ್ಥರಾದ ಶ್ರೀ. ಪ್ರವೀಣ್ ಸೂದ್, ಐಪಿಎಸ್ ರವರಿಗೆ ಹಸ್ತಾಂತರಿಸಿದರು.

ಈ ಸಂದರ್ಭದಲ್ಲಿ ಶ್ರೀ ಬಸವರಾಜ ಬೊಮ್ಮಾಯಿ, ಸನ್ಮಾನ್ಯ ಗೃಹ ಸಚಿವರು, ಡಾ॥ ರಜನೀಶ್ ಗೋಯೆಲ್, ಐಎಎಸ್, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಒಳಾಡಳಿತ ಇಲಾಖೆ, ಶ್ರೀ ಪ್ರತಾಪ್ ರೆಡ್ಡಿ, ಐಪಿಎಸ್, ಎಡಿಜಿಪಿ, ಕಾನೂನು ಮತ್ತು ಸುವ್ಯವಸ್ಥೆ, ಕರ್ನಾಟಕ ರಾಜ್ಯ ಹಾಗೂ ಇನ್ನಿತರ ಹಿರಿಯ ಪೊಲೀಸ್ ಅಧಿಕಾರಿಗಳು ಉಪಸ್ಥಿತರಿದ್ದರು.

ಪರಿಕಲ್ಪನೆ:

**ಡಾ॥ ಎಂ. ಎ. ಸಲೀಂ,** ಐ.ಪಿ.ಎಸ್.
ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು,
ಆಡಳಿತ, ಬೆಂಗಳೂರು.





**ಶ್ರೀ ಕೆ.ವಿ. ಶರತ್ ಚಂದ್ರ,** ಐ.ಪಿ.ಎಸ್.
ಆರಕ್ಷಕ ಮಹಾನಿರೀಕ್ಷಕರು,
ಆಡಳಿತ, ಬೆಂಗಳೂರು.

ಪೊಲೀಸ್ ಪ್ರಧಾನ ಕಛೇರಿ, ಕರ್ನಾಟಕ ರಾಜ್ಯ ಪೊಲೀಸ್, ನಂ. 2, ನೃಪತುಂಗ ರಸ್ತೆ, ಬೆಂಗಳೂರು – 560 001. ದೂರವಾಣಿ ಸಂಖ್ಯೆ : 080-22942107